ಮಾವನವರಿಗೆ ಕನಕಾಭಿಷೇಕ ಮಾಡಿದ್ವಿ" ಎಂದು ಹಳೆಯದನ್ನು ನೆನಪಿಸಿಕೊಂಡರು. ಅದಕ್ಕೆ ಅವರ ಸೊಸೆ "ನಿಮಗೆ ಕನಕಾಭಿಷೇಕ ಮಾಡುವ ಭಾಗ್ಯ ಬೇಗ ಬರಲಿ ಅಂತ ನಾವು ಹರಸಿಕೊಂಡಿದ್ದೇವೆ ಅತ್ತೆ" ಎಂದು ಕಾಳಜಿಯಿಂದ ಮಾತು ಸೇರಿಸಿದರು. ಇದನ್ನು ಕೇಳಿ ಅಜ್ಜಿಯ ನಿರೀಕ್ಷೆಗೆ ರೆಕ್ಕೆಪುಕ್ಕ ಬಂದು ಮನದಲ್ಲೆಲ್ಲಾ ಹಾರಾಡಲು ಪ್ರಾರಂಭಿಸಿಬಿಟ್ಟಿತ್ತು.

ಇದ್ದಕ್ಕಿದ್ದಂತೆ ಸೊಸೆಯ ತವರು ಮನೆಯ ಒಂದು ಸಮಾರಂಭಕ್ಕೆ ಕರೆ ಬಂತು. ಅಲ್ಲಿಗೆ ಎರಡು ದಿನ ಮಗ ಸೊಸೆ ಹೊರಟುನಿಂತರು. ಹುಡುಗರು ಹೇಗೋ ಹೊರಗಡೆ ಊಟತಿಂಡಿ ಮಾಡಿಕೊಳ್ಳಬಹುದು, ಆದರೆ ಅಜ್ಜಿಯ ಊಟಕ್ಕೆ ಏನು ಮಾಡುವುದು ಎಂದು ಸೊಸೆಗೆ ಯೋಚನೆಯಾಯಿತು. ಇದನ್ನು ತಮ್ಮ ಸೊಸೆಯ ಬಳಿ ಹೇಳಿದರು.

ಅವಳು "ಅಮ್ಮ ನಾನು ಅಜ್ಜಿ ಕೈಯಲ್ಲಿ ಹೇಳಿಸಿಕೊಂಡು ಅಡುಗೆ ಮಾಡ್ತೀನಿ. ನನಗೂ ಕಲಿತ ಹಾಗಾಗುತ್ತೆ. ಬೇಕಿದ್ರೆ ನಿಮ್ಮ ಮಗನ ಸಹಾಯನೂ ತೊಗೋತೀನಿ. ನೀವಿಬ್ರೂ ನಿಶ್ಚಿಂತೆಯಿಂದ ಹೋಗಿಬನ್ನಿ; ಬೇಕಾದರೆ ಇನ್ನೂ ಎರಡು ದಿನ ಇದ್ದುಬಿಟ್ಟು ಬನ್ನಿ" ಅಕ್ಕರೆಯಿಂದ ಹೇಳಿದಳು.

ಇದನ್ನು ಕೇಳಿಸಿಕೊಂಡ ಅಜ್ಜಿ "ಇದೇನು ದೊಡ್ಡ ವಿಷಯ ಅಂತ ಆಡ್ತೀಯೆ! ಮನೆಯಲ್ಲಿ ನಾವಿಬ್ಬರು ಹೆಂಗಸರು ಇರೋವಾಗ ಮೂರು ಜನಕ್ಕೆ ಅಡುಗೆ ಮಾಡೋಕಾಗಲ್ಲ ಅಂದ್ರೆ ನಾಚಿಕೆಗೇಡು. ನಾನು ಸಂಭಾಳಸ್ತೀನಿ. ನೀವು ಹೊರಡಿ" ಎಂದಿದ್ದರು.

ಅವರು ಹೊರಟ ತಕ್ಷಣ ಅಜ್ಜಿ ಒಂದು ಯೋಜನೆಯನ್ನು ತಮ್ಮ ಮನದಲ್ಲೇ ಸಿದ್ಧಪಡಿಸಿಕೊಂಡರು. ಅದನ್ನು ಕಾರ್ಯಗತ ಮಾಡಬೇಕಾದ ರೀತಿ, ಕೊನೆಗೆ ಅದರ ಪರಿಣಾಮವನ್ನು ನೆನೆಸಿಕೊಂಡು ಅವರಿಗೆ ಸಂತೋಷವಾಯಿತು. ಜೊತೆಗೆ ಮುಖದ ಮೇಲೆ ನಗು ತಾನಾಗಿಯೇ ಮೂಡಿತು.

"ಏನಜ್ಜಿ, ಏನೋ ಜ್ಞಾಪಿಸಿಕೊಂಡು ನಗುತ್ತಾ ಇದ್ದೀರಿ?" ಎಂದು ಮೊಮ್ಮಗಳು ಖುಷಿಯಾಗಿ ಕೇಳಿದಳು.

ಅಜ್ಜಿ "ಏನಿಲ್ವೇ, ನಿನ್ನ ಕೈಯಲ್ಲಿ ಇವತ್ತು ಸೊಪ್ಪಿನ ಹುಳಿ ಮಾಡಿಸೋಣ ಅನ್ಕೊಂಡೆ. ಎಲ್ಲಿ ಅವನು, ನಿನ್ನ ಗಂಡ. ಹಿತ್ತಲ್ಲಿ ಬಿಟ್ಟಿರೋ ದಂಟು ಕಿತ್ತುಕೊಂಡು ಬರ್ಲೇಕು, ಕರಿ" ಎಂದರು.

ಮೊಮ್ಮಗನ ಕೈಗೆ ಬುಟ್ಟಿಕೊಟ್ಟು "ನೋಡೋ, ದೊಡ್ಡ ಎಲೆಗಳನ್ನು ಚಿಕ್ಕರೆಂಬೆಗಳನ್ನು ಕೀಳು. ದಪ್ಪ ದಂಟನ್ನು ಹಾಗೇ ಬಿಡು. ಮತ್ತೆ ಚಿಗುರಿ ಇನ್ನೊಂದು ಸರ್ತಿ ದಂಟು ಸಿಗುತ್ತೆ" ಎಂದರು. ಅನಂತರ ಕೆಳಗೆ ನೋಡಿ "ಓಹೋ, ಹೊನಗೊನೆ ಸೊಪ್ಪು ಇದೆ" ಎಂದು ಕುಳಿತು, ಪೊದೆಯಂಥ ಗಿಡದಿಂದ ಸೊಪ್ಪನ್ನು ಬಿಡಿಸಿ ಬುಟ್ಟಿಗೆ ಹಾಕಿದರು.

ಮೊಮ್ಮಗಳು ಅವರಿಗೆ ಕೈಜೋಡಿಸಿದಾಗ "ನೋಡಿಕೊಂಡು ಸೊಪ್ಪು ಬಿಡಿಸಿಕೊ. ನಾವು ಹಿತ್ತಲ್ಲಿ ತಲೆ ಬಾಚಿಕೊಂಡಾಗ ಕೂದಲು ಹಾರಿಬಂದು ಇದರಲ್ಲಿ ಸೇರಿಕೊಂಡಿರುತ್ತೆ" ಎಂದು ಪಾಠ ಮಾಡಿದರು.

"ಅಜ್ಜಿ ಟೊಮೆಟೊ ಹಣ್ಣಾಗಿದೆ, ಕೀಳ್ತೀನಿ, ಅದರ ಸೊಪ್ಪು ಹುಳಿಗೆ ಹಾಕಬಹುದಾ?" ಮೊಮ್ಮಗ ಕೇಳಿದ.

"ಬೇಡ ಬೇಡ, ಬರಿ ನಾಲ್ಕೈದು ಕೆಂಪು ಟೊಮೆಟೊ ಕೀಳು. ಅದನ್ನ ಹೆಚ್ಚಿ ಮೊಸರಿಗೆ ಹಾಕೋಣ" ಎಂದರು. ಕಿತ್ತ ಸೊಪ್ಪನ್ನು ತೊಳೆದು "ಇಷ್ಟು ನಮಗೆ ಒಂದು ಹೊತ್ತಿಗೆ ಸಾಕಾಗುತ್ತೆ" ಎಂದು ಅಡುಗೆ ಮಾಡುವುದನ್ನು ಹೇಳಿಕೊಡಲು ಪ್ರಾರಂಭಿಸಿದರು. ಜೊತೆಗೆ ತಮ್ಮ ಯೋಜನೆಯಂತೆ ಮೊಮ್ಮಗನ ಹೆಂಡತಿಯ ಬಳಿ ಪ್ರೀತಿಯಿಂದ ಮಾತನಾಡಲು ಪ್ರಾರಂಭಿಸಿದರು.

ಪೀಠಿಕೆ ಎಲ್ಲ ಮುಗಿದ ಮೇಲೆ "ರಾತ್ರೆ ಮಲಗುವ ಮುಂಚೆ ಮನಸ್ಸು ಸಂತೋಷದಿಂದ ಇರುವಂತೆ ನೋಡಿಕೊಳ್ಳಬೇಕು. ಅದಕ್ಕೆ ನಮ್ಮ ಕಾಲದಲ್ಲಿ ಏನು ಮಾಡ್ತಾ ಇದ್ವಿ ಗೊತ್ತಾ?" ಎಂದು ಕೇಳಿದರು.

"ಏನ್ ಮಾಡ್ತಾ ಇದ್ರಿ ಅಜ್ಜಿ?"

"ಪಣ ಇಟ್ಟು ಲೆತ್ತದ ಆಟ ಆಡ್ತಾ ಇದ್ವಿ"

"ಲೆತ್ತ ಅಂದ್ರೆ?"

"ಲೆತ್ತ ಅಂದ್ರೆ ಪಗಡೆ ಆಟ"

"ಹೌದಾ, ನಾನು ಪಗಡೆ ಆಟದ ಹೆಸರು ಕೇಳಿದೀನಿ. ಆದರೆ ಆಟ ಆಡಿಲ್ಲ."

"ಅದೇನು ದೊಡ್ಡ ಬ್ರಹ್ಮವಿದ್ಯೇನೆ? ನಾನು ಹೇಳಿಕೊಡುತ್ತೇನೆ. ಗಂಡಹೆಂಡತಿ ಇಬ್ಬರೂ ಪ್ರತಿರಾತ್ರಿ ಮಲಗುವುದಕ್ಕೆ ಮುಂಚೆ ಒಂದೆರಡು ಆಟ ಆಡಿ ಮಲಗಿಕೊಳ್ಳಿ. ಮನಸ್ಸು ಪ್ರಫುಲ್ಲವಾಗಿರುತ್ತೆ"

"ಹೌದಾ ಅಜ್ಜಿ, ಇವತ್ತು ಮಧ್ಯಾಹ್ನ ಹೇಳಿಕೊಡಿ"

"ಆದರೆ ಅದಕ್ಕಿಂತ ಮುಖ್ಯವಾದುದು ಅಂದ್ರೆ ಆಟದಲ್ಲಿ ಪಣ ಇಡುವುದು"

"ಪಣ? ಅಂದ್ರೆ ಹಣ ಇಟ್ಟು ಆಡಬೇಕಾ ಅಜ್ಜಿ?"

"ಹುಚ್ಚುಹುಡುಗಿ, ಪಣ ಅಂದರೆ ಆಟದಲ್ಲಿ ಸೋತವರು ಗೆದ್ದವರಿಗೆ ಅವರು ಕೇಳಿದ್ದು ಕೊಡಬೇಕು. ಅದು ಪಣ!"

"ಪಗಡೆ ಆಡುವಾಗ ನೀವು ಗೆಲ್ಲುತ್ತಿದ್ರಾ ಅಜ್ಜಿ?" ಅಮಾಯಕ ಮೊಮ್ಮಗಳ ಪ್ರಶ್ನೆ.

"ಹೂಂ ನಿಮ್ಮ ತಾತನ ಜೊತೆ ಆಡಬೇಕಾದರೆ ನಾನು ಗೆದ್ದಿದ್ದ ಮುತ್ತುಗಳನ್ನು ಪೋಣಿಸಿಕೊಂಡಿದ್ದರೆ ಕುತ್ತಿಗೆಯಿಂದ ಮೊಣಕಾಲವರೆಗೆ ನಾಲ್ಕು ಎಳೆ ಸರವಾಗುತ್ತಿತ್ತು!" ಎಂದು ಕಿಸಕ್ಕನೆ ನಕ್ಕರು.

ಮೊಮ್ಮಗಳು "ಹೌದಾ! ಈಗ ಆ ಸರ ಎಲ್ಲಿ ಅಜ್ಜೀ?" ಎಂದು ಮುಗ್ಧತೆಯಿಂದ ಕೇಳಿದಳು.

ಅಷ್ಟು ಹೊತ್ತಿಗೆ ಮನೆಯ ಕರೆಗಂಟೆ ಶಬ್ದವಾಗಿ, ಮೊಮ್ಮಗ "ಅಜ್ಜಿ ನಿಮ್ಮ ನೆಂಟರಂತೆ, ಯಾರೋ ಬಂದಿದ್ದಾರೆ" ಎಂದು ಕರೆದ. ಅಜ್ಜಿ "ಯಾರಪ್ಪ ಅದು?" ಎನ್ನುತ್ತಾ ಅಡುಗೆಮನೆಯಿಂದ ಹೊರಗೆ ನಡೆದರು.

ಹೊರಗೆ ಕುರ್ಚಿಯ ಮೇಲೆ ಕುಳಿತಿದ್ದ ಮಧ್ಯ ವಯಸ್ಸಿನ ದಢೂತಿ ವ್ಯಕ್ತಿ "ಚೆನ್ನಾಗಿದೀರಾ ಅಜ್ಜಿ, ನಾನು ಯಾರು ಅಂತ ಜ್ಞಾಪಕಕ್ಕೆ ಬಂತಾ?" ಎಂದು ಕೇಳಿದ. ತಮ್ಮ ಯೋಜನೆಯ ಮಧ್ಯೆ ಅಡ್ಡಿ ತಂದವನನ್ನು ನೋಡಿ 'ಇವನು ಈಗಲೇ ವಕ್ಕರಿಸಿಕೊಬೇಕಾಗಿತ್ತಾ. ಆದಷ್ಟು ಬೇಗ ಸಾಗಹಾಕಬೇಕು' ಎಂದುಕೊಂಡರು. "ತಪ್ಪು ತಿಳಿಬೇಡಪ್ಪ, ದೃಷ್ಟಿ ಸ್ವಲ್ಪ ಮಂದವಾಗಿ ಹೋಗಿದೆಯಪ್ಪ" ಎಂದರು ಅಜ್ಜಿ. ಮೊಮ್ಮಗ ಆಶ್ಚರ್ಯದಿಂದ ಅವರ ಕಡೆ ನೋಡಿದ.

ಆ ವ್ಯಕ್ತಿ "ನಾನು ಅಜ್ಜಿ, ಭೀಮಾಪುರದ ಭೀಮಣ್ಣ, ನಿಮ್ಮ ನೆಂಟ! ನಿಮ್ಮ ಮನೆಗೆ ಬಂದಾಗಲೆಲ್ಲ ಅಚ್ಚೇರಕ್ಕಿ ಅನ್ನ ಮಾಡಿ ಬಡಿಸಿ, 'ನಿನ್ನಂಥೋರಿಗೆ ಅನ್ನ ಬಡಿಸಲು ಪುಣ್ಯ ಮಾಡಿದ್ದೆ' ಅಂತಿದ್ರಲ್ಲ, ಆ ಭೀಮಣ್ಣ" ಎಂದ.

"ಓ, ಭೀಮಾಪುರದ ಬ" ಎಂದು ಕೊನೆಯ ಶಬ್ದವನ್ನು ಅಜ್ಜಿ ನುಂಗಿಕೊಂಡುಬಿಟ್ಟರು.

"ಪರವಾಗಿಲ್ಲ ಹೇಳಿ ಅಜ್ಜಿ, ನನಗೆ ಅದೇ ಆಶೀರ್ವಾದ! ಹೌದು ಆ ಭೀಮಾಪುರದ ಬಕಾಸುರ ನಾನೇ!" ಭೀಮಣ್ಣ ನಗುತ್ತ ಹೇಳಿದ.

"ಏನೋ ಭೀಮಣ್ಣ! ಗುರುತು ಹಿಡಿಯೋಕೆ ಆಗದೆ ಇರುವಷ್ಟು ಸೊರಗಿ ಹೋಗಿದ್ಯಲ್ಲೋ; ಅದೇನು ಇಲ್ಲಿ?"

"ಇಲ್ಲೇ ಯಾವುದೋ ಕಚೇರಿ ಕೆಲಸ ಇತ್ತು, ಬಂದೆ. ನೀವು ಇಲ್ಲಿರೋದು ಗೊತ್ತಾಯ್ತು. 'ಇನ್ನು ನನ್ನ ಕಷ್ಟ ಪರಿಹಾರ ಆಯ್ತು' ಅಂತ ಸೀದಾ ಹುಡುಕಿಕೊಂಡು ಇಲ್ಲಿಗೆ ಬಂದ್ಬಿಟ್ಟೆ" ಅಂದ ಆ ಭೂಪತಿ.

ಅಜ್ಜಿಗೆ ಆತಂಕ ಪ್ರಾರಂಭವಾಗಿತ್ತು. 'ಅಲ್ಲ ಈ ಬಕಾಸುರನಿಗೆ ನನ್ನ ಸುಕುಮಾರಿ ಹತ್ತಿರ ಅಡುಗೆ ಮಾಡಿಸುವುದೇ? ಈಗ ಮಾಡಿರುವುದು ನಮ್ಮ ಊಟಕ್ಕೆ ಸರಿ ಹೋಗುತ್ತೆ' ಅನ್ನಿಸಿಬಿಟ್ಟಿತ್ತು, ಆ ಕಿಲಾಡಿ ಅಜ್ಜಿಗೆ.

ಸಾವರಿಸಿಕೊಂಡು, "ಭೀಮಣ್ಣಾ, ಅವತ್ತು ನೀನು ಬಂದಿದ್ದಾಗ ಸೊಪ್ಪಿನ ಹುಳಿ ಮಾಡಿದ್ದೆ. ನೆನಪಿದೆಯೇ?" ಅಜ್ಜಿ ಕೇಳಿದರು.

"ಅಯ್ಯೋ ನೆನಪಿಲ್ಲದೇ ಏನಜ್ಜಿ! ಎಷ್ಟು ರುಚಿಯಾಗಿತ್ತು ಅಂದ್ರೆ ಅದರ ಜೊತೆಗೆ ಐದಾರು ಬಾಳಕದ ಮೆಣಸಿಕಾಯಿನೂ ಹೊಟ್ಟೆಗೆ ಹೋಗಿತ್ತು."

"ಅದು ನಮ್ಮ ಎದುರು ಮನೆಯಲ್ಲಿ ಬಿಟ್ಟಿದ್ದು. ಅವತ್ತು ಅವರ ಮನೆಯಲ್ಲಿ ತಾಯಿ ಮಗಳು ಇಬ್ಬರೇ ಇದ್ದರು. ಅವರ ಮನೆಯಲ್ಲೂ ಮಗಳು ಕಿತ್ತು ತಂದ ಸೊಪ್ಪಿನ ಹುಳಿ. ಅವರು ಊಟ ಮಾಡಿದ ಸ್ವಲ್ಪ ಹೊತ್ತಿನ ಅನಂತರ ಇಬ್ಬರು ಜೋರಾಗಿ ನಗಲು ಪ್ರಾರಂಭಿಸಿ ಬಿಟ್ಟರು. ಅದು ಎಷ್ಟು ಜೋರಾಗಿತ್ತು ಅಂದರೆ ನಾವು ಅಕ್ಕಪಕ್ಕದವರೆಲ್ಲ ಹೋಗಿ ಕಿಟಕಿಯಲ್ಲಿ ಇಣುಕಿ ನೋಡಿದೆವು. ಕರೆದರೂ ನಮ್ಮ ಕಡೆ ಗಮನವೇ ಇಲ್ಲ. ಇಬ್ಬರೂ ಕೈ ಹಿಡಿದುಕೊಂಡು ಹುಚ್ಚು ಹಿಡಿದವರ ಹಾಗೆ ಜೋರಾಗಿ ನಗುವುದು, ಮೇಲಕ್ಕೆ ಎಗರುವುದು ಮಾಡುತ್ತಾ ಇದ್ದರು. ನಮಗೆ ಆತಂಕ.

"ಅಷ್ಟರಲ್ಲಿ ಒಬ್ಬರು 'ಇಲ್ಲಿ ನೋಡಿ, ಈ ಉಮ್ಮತ್ತ ಸೊಪ್ಪಿನ ಗಿಡ! ಇದನ್ನು ತರಚಿದ ಹಾಗಿದೆ. ಸೊಪ್ಪಿನ ಜೊತೆಗೆ ಇದೂ ಹೊಟ್ಟೆಗೆ ಹೋಗಿದೆ. ಅದರ ಪರಿಣಾಮವೇ ಇದು. ಅವರ ಪಾಡಿಗೆ ಅವರನ್ನು ಬಿಟ್ಟುಬಿಡಿ. ಆ ಉಮ್ಮತ್ತ ಸೊಪ್ಪಿನ ಪ್ರಭಾವ ಕಡಿಮೆ ಆದರೆ ಎಲ್ಲಾ ಸರಿ ಹೋಗುತ್ತೆ' ಎಂದರು. ನಾವು ಮನೆಗೆ ವಾಪಸ್ಸು ಹೋದ್ವಿ" ಅಜ್ಜಿ